# ಪುತ್ತೂರು ಪುರಸಭೆ
## ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ/ಕ್ರ.ಸಂ/ಪು/ಮುನ್/ಸಿಆರ್/50/2008–09　　　　ಪುರಸಭಾ ಕಾರ್ಯಾಲಯ, ಪುತ್ತೂರು
ದಿನಾಂಕ:24/07/2008

### 30 KVA ನ ಡೀಸಿಲ್ ಜನರೇಟರ್ ಪೂರೈಕೆಗಾಗಿ ಟೆಂಡರ್:

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯಿದೆ 1999 ಮತ್ತು ನಿಯಮಗಳು 2000ರಂತೆ)

ಪುತ್ತೂರು ಪುರಸಭೆ ಕಛೇರಿಗೆ 30 KVA ನ ಒಂದು ಜನರೇಟರ್ (Generator) ಖರೀದಿಸುವ ಸಲುವಾಗಿ ಪ್ರತಿಷ್ಠಿತ ತಯಾರಕರು/ಅಧಿಕೃತ ಮಾರಾಟಗಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಅದರಂತೆ ಆಸಕ್ತಿಯುಳ್ಳವರು ದಿನಾಂಕ:28/08/2008ರಂದು ಗುರುವಾರ ಸಂಜೆ ಗಂಟೆ 4.00ರೊಳಗಾಗಿ ಭರ್ತಿಗೊಳಿಸಿದ ಟೆಂಡರ್ ಫಾರ್ಮನ್ನು ಸೀಲು ಮಾಡಿದ ಲಕೋಟೆಯೊಂದಿಗೆ ಟೆಂಡರನ್ನು ಪುರಸಭೆ ಪುತ್ತೂರು ಇಲ್ಲಿಗೆ ಸಲ್ಲಿಸುವುದು. ನಿಗದಿತ ಸಮಯಕ್ಕಿಂತ ತಡವಾಗಿ ಬಂದ ಟೆಂಡರನ್ನು ಸ್ವೀಕರಿಸಲಾಗುವುದಿಲ್ಲ.

| ಕ್ರ.ಸಂ. | ವಿವರ | ಟೆಂಡರುದಾರರ ಅರ್ಹತೆ | ಇ.ಎಂ.ಡಿ ಮೊಬಲಗು | ಟೆಂಡರ್ ಫಾರಂ ಬೆಲೆ |
|---|---|---|---|---|
| 1. | 30 KVA ನ ಡೀಸಿಲ್ ಜನರೇಟರ್ | ಪ್ರತಿಷ್ಟಿತ ತಯಾರಕರು/ ಅಧಿಕೃತ ಮಾರಾಟಗಾರರು | 10,000.00 | 250.00 |

**ಸೂಚನೆಗಳು:**

1. ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ಮತ್ತು ಖಾಲಿ ಟೆಂಡರ್ ಫಾರಂಗಳನ್ನು ಕೊಡುವ ದಿನಾಂಕ: 28/07/2008 ರಿಂದ 27/08/2008 ರ ಸಂಜೆ ಗಂಟೆ 4.00ರ ವರೆಗೆ.
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 28/08/2008ರ ಸಂಜೆ ಗಂಟೆ 4.00ರ ವರೆಗೆ.
3. ಟೆಂಡರ್ ಸಾಧ್ಯವಾದಲ್ಲಿ 28/08/2008ರಂದು ಸಂಜೆ ಗಂಟೆ 4.30ಕ್ಕೆ ತೆರೆಯಲಾಗುವುದು ಅಥವಾ ಮುಂದಿನ ದಿನಾಂಕವನ್ನು ತಿಳಿಸಲಾಗುವುದು.
4. ಟೆಂಡರ್ ಫಾರಂ ತೆರೆಯುವ ಸ್ಥಳ : ಕಛೇರಿ, ಪುರಸಭೆ ಪುತ್ತೂರು.
5. ಟೆಂಡರುದಾರರು ಇ.ಎಂ.ಡಿ ಮೊಬಲಗನ್ನು ಕಛೇರಿಯಲ್ಲಿ ನಗದು ರೂಪದಲ್ಲಿ ಪಾವತಿಸಬಹುದಾಗಿದೆ ಅಥವಾ ಪುರಸಭಾ ಮುಖ್ಯಾಧಿಕಾರಿಯವರಿಗೆ ರಾಷ್ಟ್ರೀಕೃತ ಬ್ಯಾಂಕುಗಳ ಡಿಮಾಂಡ್ ಡ್ರಾಫ್ಟ್ ಯಾ ಬ್ಯಾಂಕರ್ಸ್ ಚೆಕ್ ಮುಖಾಂತರ ಪಾವತಿಸಬಹುದಾಗಿದೆ.
6. ಟೆಂಡರ್ ಫಾರಂ ಬೆಲೆಯನ್ನು ಪುರಸಭೆಯಲ್ಲಿ ನಗದು ರೂಪದಲ್ಲಿ ಅಥವಾ ಡಿಮಾಂಡ್ ಡ್ರಾಫ್ಟ್ ಯಾ ಬ್ಯಾಂಕರ್ಸ್ ಚೆಕ್ ಮುಖಾಂತರ ಪಾವತಿಸಬಹುದಾಗಿದೆ. (ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ).
7. ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಪುರಸಭೆಯ ಮುಖ್ಯಾಧಿಕಾರಿಯವರು ಹೊಂದಿರುತ್ತಾರೆ.
8. ಅಪೂರ್ಣವಾಗಿ ಭರ್ತಿಗೊಳಿಸಿದ ಟೆಂಡರ್ ಫಾರ್ಮನ್ನು ಪರಿಗಣಿಸಲಾಗುವುದಿಲ್ಲ. ಆದುದರಿಂದ ಟೆಂಡರ್ ಫಾರ್ಮನ್ನು ಸರಿಯಾಗಿ ಪರಿಶೀಲಿಸಿ ಎಲ್ಲಾ ಮಾಹಿತಿಗಳನ್ನು ಭರ್ತಿಗೊಳಿಸಿ ಸಲ್ಲಿಸುವುದು.
9. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಪುರಸಭೆಯನ್ನು ಸಂಪರ್ಕಿಸಬಹುದಾಗಿದೆ ಅಥವಾ ವೆಬ್ ಸೈಟ್ : www.putturtown.gov.in ನ್ನು ಸಂಪರ್ಕಿಸಿ.

   ಫೋನ್ : 08251–230251, ಫ್ಯಾಕ್ಸ್ : 08251–238146

ಸಹಿ/–
ಅಧ್ಯಕ್ಷರು,
ಪುರಸಭೆ ಪುತ್ತೂರು.

ಸಹಿ/–
ಮುಖ್ಯಾಧಿಕಾರಿ,
ಪುರಸಭೆ ಪುತ್ತೂರು.